ಸಿ. ಸಿ. ನಂ.- **286/24**

ಸಿ.ಡಬ್ಲ್ಯೂ.- 12 / ಪಿ.ಡಬ್ಲ್ಯೂ.- 6

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 20-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶಿವಕುಮಾರ್ |
| ತಂದೆಯ ಹೆಸರು - | ನಿಂಗನಗೌಡ |
| ವಯಸ್ಸು - | 31 ವರ್ಷಗಳು |
| ಉದ್ಯೋಗ - | ಆಟೋ ಚಾಲಕ |
| ವಾಸಸ್ಥಳ - | ಅನಂತಶಯನ ಗುಡಿ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ನನಗೆ ಚಾಸಾ.10 ಮತ್ತು 11 ರವರ ಪರಿಚಯ ಇಲ್ಲ. ನನಗೆ ಮೃತ ಅಶ್ವಿನ್ ಕುಮಾರ್ ರವರ ಪರಿಚಯ ಇಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ನಾನು, ಮೃತ ಅಶ್ವಿನ್ ಕುಮಾರ್ ಹಾಗೂ ಇತರರು ಅಯ್ಯಪ್ಪ ಸ್ವಾಮಿ ಮಾಲೆ ಹಾಕಿದ್ದೇವು, ಆ ಸಮಯದಲ್ಲಿ ಅಪಘಾತ ಆಗಿರುತ್ತದೆ. ನಂತರ ಅಪಘಾತ ಆದ ಬಗ್ಗೆ ನನಗೆ ಪೊಲೀಸರಿಂದ ಮಾಹಿತಿ ಬಂದಿತ್ತು. ನಂತರ ನಾನು ಹೊಸಪೇಟೆಗೆ ಬಂದೆ. ನನಗೆ ಈ ಪ್ರಕರಣದ ಬಗ್ಗೆ ಇಷ್ಟೇ ಮಾಹಿತಿ ಗೊತ್ತಿದೆ. ಈ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯನ್ನು ನೋಡಿಲ್ಲ, ಅದೇ ರೀತಿ ಚಾಸಾ.9 ರವರನ್ನು ನೋಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ನಾನು ನಿಪಿ-5 ರಲ್ಲಿರುವ ವಾಹನಗಳನ್ನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿನಾಂಕ 27.12.2023 ರಂದು ಶ್ರೀಕರಿ ಕಾಲೇಜು ಕ್ರಾಸ್ ಹತ್ತಿರ ನಾನು, ಚಾಸಾ.10 ಮತ್ತು 11 ರವರು ಬರುತ್ತಿರುವಾಗ ಕೊಂಡನಾಯಕನ ಹಳ್ಳಿ ಕಡೆಯಿಂದ ಒಂದು ಮೋಟಾರ್ ಸೈಕಲ್ ನಲ್ಲಿ ಒಬ್ಬ ಅಯ್ಯಪ್ಪ ಸ್ವಾಮಿ ತನ್ನ ಹಿಂದುಗಡೆ ಒಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಶ್ರೀಕರಿ ಕಾಲೇಜು ಕಡೆಗೆ

ಹೋಗುತ್ತಿರುವಾಗ ಹೊಸಪೇಟೆ ಕಡೆಯಿಂದ ಬಂದ ಒಂದು ಮೋ.ಸೈ ಚಾಲಕ ತನ್ನ ಮೋ.ಸೈ ನಲ್ಲಿ ಒಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಆ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆ ಯಿಂದ ಚಾಲನೆ ಮಾಡಿಕೊಂಡು ಬಂದು, ಹೀಗೆ ಬರುತ್ತಿದ್ದ ಇನ್ನೊಂದು ಮೋ.ಸೈ. ಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಹೀಗೆ ಕೊಂಡನಾಯಕನಹಳ್ಳಿ ಕಡೆಯಿಂದ ಬಂದ ಮೋ.ಸೈ ಸಂ.ಕೆಎ-35-ಇಬಿ-8689 ಆಗಿದ್ದು ಅದರ ಚಾಲಕ ಮೃತ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ಮೋ.ಸೈ ಸಂ.ಎಂ ಹೆಚ್-45-ಎಕೆ-2574 ಆಗಿದ್ದು, ಅದರ ಚಾಲಕ ಆರೋಪಿ ಆಗಿದ್ದು, ಅವರ ಹಿಂದೆ ಚಾಸಾ.9 ರವರು ಕೂತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ಅಶ್ವಿನಕುಮಾರ್ ರವರು ಮೃತಪಟ್ಟರು ಎಂದರೆ ಸರಿ. ನಾನು ಈ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ ಎಸ್ ಕೆ ಡಿ ಆರ್ ರವರಿಂದ-

ಅಪಘಾತದ ಮಾಹಿತಿ ತಿಳಿದು ನಾನು, ಚಾಸಾ.10 ಮತ್ತು 11 ರವರು ಆಸ್ಪತ್ರೆಗೆ ಹೋಗಿದ್ದೇವು ಎಂರೆ ಸರಿ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.